Reg No. B G 155

28-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳವಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇಪಚ್ಚೆ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಅಗಿ ಆನಾಹುತ, ಜೂಜಿನಕುದುರೆಗಳು ಬೆಂದುಹೋದವು, ತುಂಬಾ ನಷ್ಟ

Governments

should function in such a way
as people may sing—

' We will honour yet the Rule
we know,
The best Rule of all '.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆವೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಅಗ್ನಿಗೆ ಕುದುರೆಗಳ ಆಹುತಿ

ಬೆಂಗಳೂರು— ನಿನ್ನೆ ಆರಮನೆ ಪೋಲೋ ಆವರಣದಲ್ಲಿ ಕುದುರೆ ತಬೇಲಿಯಲ್ಲಿ ಭೀಕರ ಅಗ್ನಿ ಅನಾಹುತದಿಂದ 38 ಜೂಜಿನ ಕುದುರೆಗಳು ಸತ್ತವು – 4 ಕುದುರೆಗಳು ಅಲ್ಲಿಂದ ಬಿಡಿಸಿಕೊಂಡು ಹಚ್ಚು ಚ್ಚಾಗಿ ಓಡಾಡಿ ಬಿದ್ದು ಸತ್ತವು – ಅಗ್ನಿ ಶಾಮಕ ದಳದವರೂ ಪೋಲೀಸರೂ 40 ಪ್ರಾಣಿಗಳನ್ನು ರಕ್ಷಿಸಿದರು – ರೂ 20 ಲಕ್ಷ ನಷ್ಟ ಸಂಭವಿಸಿರುವುದಾಗಿ ಹೇಳಲಾಗಿದೆ – ವಿನಾಶಕಾರಿ ಕಾರ್ಯ ನಡೆದಿರುವದೆಂದು ಹೇಳಲಾಗುತ್ತಿದೆ – ಫೈಗ್ರೌಂಡ್ ಪೋಲಿಸರು ಅಗ್ನಿಸ್ಪರ್ಶ ಜಿಜ್ಞಾಸ್ಪದವೆಂದು ರಿಜಿಸ್ಟರು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ – ಈ ಬಗ್ಗೆ ಅನೇಕರನ್ನು ಪ್ರಶ್ನಿಸಲಾಗುತ್ತಿದೆ.

★

ಕೋತಿ ರಫ್ತು

ಭಾರತವು ಕೋತಿಗಳನ್ನು ಅಮೇರಿಕ, ಬ್ರಿಟ್ ಪಶ್ಚಿಮ ಜರ್ಮನಿ ಮುಂತಾದ ಕೆಲವು ಪಾಶ್ಚಾತ್ಯ ದೇಶಗಳಿಗೆ ಪುನಃ ರಫ್ತು ಮಾಡಲು ಪ್ರಾರಂಭಿಸಿದೆ 1966–67. 67–68 ರಲ್ಲಿ 44158 ಮತ್ತು 44167 ಕೋತಿಗಳನ್ನು ರಫ್ತು ಮಾಡಲಾಗಿದೆ.

★

ಮುಖ್ಯಮಂತ್ರಿಗಳಲ್ಲಿ ಮನವಿ

ಬೆಂಗಳೂರು— ಸ್ವಾತಂತ್ರ್ಯಪೂರ್ವ ಅಗಸಾಲಿಗರ ಮಕ್ಕಳಿಗೆ ಸರಕಾರಿ ಕೆಲಸಕೊಡುವದರಲ್ಲಿ ಮೊದಲಿನ ಹಕ್ಕಿರಬೇಕೆಂಬ ಒತ್ತಾಯದ ಮನವಿಪತ್ರವನ್ನು ಮುಖ್ಯ ಮಂತ್ರಿಗಳಿಗೆ ಅರ್ಪಿಸಲಾಯಿತು – ಅಂಥವರ ವಿಧವೆಯರಿಗೆ ತಲಾ ರೂ 250 ಸಹಾಯಧನ ನೀಡುವಂತೆಯೂ ಕೇಳಿಕೊಳ್ಳಲಾಯಿತು.

ದಿವ್ಯವಾಣಿ

ಎಲ್ಲಿ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವದೋ, ಅಥವಾ ನ್ಯಾಯಕ್ಕೆ ಜೆಬರಿಕೆ ಬೀಳುವುದೋ, ಅಥವಾ ಆಕ್ರಮಣ ನಡೆಯುವುದೊ, ಆಗ ನಾವು ತಟಸ್ಥರಾಗಿರಲಾರೆವು ಮತ್ತು ಆಗಿರುವದಿಲ್ಲ.

— ಜವಹರಲಾಲ್ ನೆಹ್ರೂ

★

ಇಲಿ ಹಣ ತಿಂತು

ಇಟಲಿಯಲ್ಲಿ ಇಲಿಗಳು ಕರೆನ್ಸಿ ನೋಟುಗಳನ್ನು ತಿಂದುಹಾಕಿದ ಪ್ರಸಂಗ ವರದಿಯಾಗಿದೆ. ಒಬ್ಬ ಟರ್ಕಿ ರೈತನು ಮನೆ ಕಟ್ಟುವದಕ್ಕಾಗಿ 10 ವರ್ಷಗಳಿಂದ 15 ಸಾವಿರ ಲಿರಾ (ರೂ 13000) ಕೇಖುರಿಸಿ ರೇಡಿಯೋ ಸೆಟ್‌ನಲ್ಲಿಟ್ಟಿದ್ದನ್ನು ಇಲಿಗಳು ತಿಂದುಹಾಕಿರುವದು ಕಂಡುಬಂದಿದೆ.

☆

ಸಮುದ್ರದ ಗೋಡೆ ಕುಸಿತ

ಕಲ್ಲೀಕೋಟೆ— ಪರಪನ್ನಂಗುಡಿಯಲ್ಲಿ ಸಮುದ್ರ ನುಗ್ಗದಂತೆ ಹಾಕಿದ್ದ ಗೋಡೆ 40 ಮಾಟರು ಕುಸಿದಿದೆ, 40 ಮಾಟರು ಗಳಷ್ಟು ಅಲುಗಿದೆ - ಇರ್ಗಾಲಿನಲ್ಲಿ ಸಮುದ್ರದ ಗೋಡೆ 20 ಮಾಟರುಗಳಷ್ಟು ಉದ್ದ ಅರ್ಧ ಮಾಟರು ಒಳಗಿಳಿದಿದೆ.

★

ನೀರಿನ ವ್ಯಾಜ್ಯ

ಬೆಂಗಳೂರು— ಕೃಷ್ಣಾ–ಗೋದಾವರಿ ನೀರಿನ ವ್ಯಾಜ್ಯದಲ್ಲಿ ತನ್ನ ವಿವರಿಸಲಾಗ ಹಕ್ಕನ್ನು ಮೈಸೂರು ಸರಕಾರ ತಾ || 28 ರಂದು ಅಂತರರಾಜ್ಯ ನೀರು ನ್ಯಾಯ ಮಂಡಲಿ ಮುಂದಿಡುವುದು.

●

ವಲಸೆಗಾರರು ಬೇಕು

ಪಿಡ್ನಿ— ಆಸ್ಟ್ರೇಲಿಯಾಕ್ಕೆ ಇನ್ನು 30 ವರ್ಷಗಳಲ್ಲಿ 7 - 8 ಮಿಲಿಯ ವಲಸೆಗಾರರು ಬೇಕೆಂದು ವಲಸೆ ಮಂತ್ರಿ ಹೇಳಿದರು.

ಹರಿಜನ ಉಪಾಧ್ಯಕ್ಷರು

ನವದೆಹಲಿ— ಉಪರಾಷ್ಟ್ರಾಧ್ಯಕ್ಷತೆಗೆ ಉತ್ತರದಲ್ಲಿನ ಹರಿಜನರೊಬ್ಬರನ್ನು ತರುವ ಯೋಜನೆ ಇರುವದಾಗಿ ವರದಿಯಾಗಿದೆ – ಚುನಾವಣೆ ಆಗಸ್ಟು 30 ರಂದು ನಡೆಯಲಿದೆ.

ಪ್ರವೇಶ ಸಿಕ್ಕಲಿಲ್ಲ

ಜಗರ್ತ— ಭಾರತದ ರಾಯಲ್ ಸರ್ಕಸ್ ಪ್ರಾರಂಭವನ್ನು ನೋಡಲು ಇಂಡೋನೇಷ್ಯಾ ವಿದೇಶಾಂಗ ಮಂತ್ರಿ ಮತ್ತು ಅವರ ಸಂಸಾರದವರಿಗೆ ಅನಕಾಶ ಸಿಕ್ಕಲಿಲ್ಲ – ಸೀಟ್‌ಗಳಿಲ್ಲವೆಂದು ಸರ್ಕಸ್ ಅಧಿಕಾರಿಗಳು ತಿಳಿಸಿದರು

ಹಣ ಪಡೆದ ಮಗು

ಜೋಧಪುರದ 1 ವರ್ಷದ ಹುಡುಗಿಗೆ ಕೇರಳ ಲಾಟರಿಯಲ್ಲಿ ಪ್ರಥಮ ಬಹುಮಾನ ರೂ. 1 ಲಕ್ಷ ಬಂತಿದೆ - ಆ ಹುಡುಗಿಯೊಡನೆ ವಿವಾಹ ನಿಶ್ಚಯಕ್ಕಾಗಿ ಜನ ಬರುತ್ತಿರುವರೆಂದು ಅದರ ತಂದೆ ಜಂಭದಿಂದ ಹೇಳುತ್ತಿರುವನಂತೆ.

ಬ್ಯಾಂಕು ರಾಷ್ಟ್ರೀಕರಣ

ಬೆಂಗಳೂರು— ಬ್ಯಾಂಕು ರಾಷ್ಟ್ರೀಕರಣವನ್ನು ಹೃತ್ಪೂರ್ವಕ ಸ್ವಾಗತಿಸಿದ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು, ಬ್ಯಾಂಕುಗಳು ರಾಜ್ಯ ಸರಕಾರದ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ನೀಡಲಿರುವ ಆರ್ಥಿಕ ನೆರವು ತಕ್ಕಕೆಳಗಾಗುವಂತೆ ಏನೂ ಮಾಡಬಾರದೆಂದು ಕೇಂದ್ರಕ್ಕೆ ಎಚ್ಚರಿಸಿರುವರು.

● ಬೆಂಗಳೂರು— ಈಗಿರುವ 3000 ಶಾಸನಭೋಗರ ಜೊತೆಗೆ ಮತ್ತೆ 800 ಮಂದಿಯನ್ನು ತೆಗೆದುಕೊಳ್ಳಬೇಕೆಂದು ವಿಭಾಗಾಧಿಕಾರಿಗಳ ಸಮ್ಮೇಳನ ಶಿಫಾರಸು ಮಾಡಿದೆ.

ಆ ಂ ದು – ಇ ಂ ದು

ಸ್ಟೇಟ್ಸ್‌ಮನ್ ಪತ್ರಿಕೆಯಲ್ಲಿ ಪ್ರಕಟವಾದದ್ದು. 14–7–94 ರಂದು (75 ವರ್ಷಗಳ ಹಿಂದೆ) ಕಾಠೀಘಾಟಿನ ಒಬ್ಬ ಪೂಜಾರಿ ಶ್ಯಾಮಚರಣ ಬ್ಯಾನರ್ಜಿ ಎಂಬಾತನು ಒಬ್ಬ ಕ್ರೈಸ್ತನ ಜೊತೆ ಊಟಮಾಡಿದನೆಂದು ಮತ್ತೊಬ್ಬ ಪೂಜಾರಿ ಸುಳ್ಳು ಮತ್ತು ಅಪಮಾನಕರ ವಾರ್ತೆ ಹರಡಿರುವನೆಂದೂ, ಅವನಿಗೆ ಸಮನ್ಸ್ ಹೆಗರಡಿಸ ಬೇಕೆಂದೂ ಆಲಿಪುರ ಪೋಲೀಸು ಕೋರ್ಟಿನಲ್ಲಿ ಮನವಿ ಮಾಡಿದನು. ಹಾಗೆ ಮಾಡಲಾಯಿತು.

† ಆಂದಿ 75 ವರ್ಷಗಳ ಹಿಂದೆ, ಹಿಂದುವು ಕ್ರೈಸ್ತನ ಜೊತೆ ಊಟ ಮಾಡಿದನೆಂಬುದು ಮಹಾ ನಿಂದ್ಯವಾಗಿತ್ತು. ಆದರೆ ಈಗ ಅದು ಸರ್ವಸಾಮಾನ್ಯ ವಿಷಯವಾಗಿದೆ ; ಯಾರೂ ಏನೂ ಹುಬ್ಬು ಹಾರಿಸುಲ್ಲ.

ನಿಜಕ್ಕೂ ನೆಹ್ರೂರ ಹಿಂದೂಕೋಡು ಕ್ರೈಸ್ತ, ಮಹಮದೀಯ ಮತ್ತಿತರ ಜಾತಿಯವರೊಡನೆ ಹಿಂದೂಗಳ ವಿವಾಹವನ್ನು ನ್ಯಾಯಸನ್ಮತ ಮಾಡಿದೆ, ಮತ್ತು ಅವರು ಹಿಂದೂಗಳಾಗಿ ಉಳಿಯಲೂ ಬಹುದು. ನವೀನ ಹಿಂದೂ ಇದನ್ನು ಪ್ರಗತಿ ಯೆಂದರೆ, ನಾವು ಅನನತಿ ಎನ್ನುತ್ತೇವೆ. (ಟ್ರೂತ್)

ಗಾಂಧೀಜೀ ಅಮೃತವಾಣಿ

ಸತ್ಯ ಮತ್ತು ಋಜುತ್ವಕ್ಕಿಂತ ಹೆಚ್ಚಿನ ಧರ್ಮವಾವುದೂ ಇಲ್ಲ.

ಭೀತಿಯದ್ದಲ್ಲಿ ಧರ್ಮವಿಲ್ಲ.

ಅಹಿಂಸೆ ನನ್ನ ದೇವರು, ಸತ್ಯ ನನ್ನ ದೇವರು.

ಸಂಪತ್ತನ್ನು ಉದಾರ ರೀತಿಯಲ್ಲಿ ಸದ್ವಿನಿಯೋಗ ಮಾಡದಿದ್ದರೆ, ಹೆಚ್ಚು ಹೆಚ್ಚು ಹಣವನ್ನು ಸಂಗ್ರಹಿಸುವ ಹವ್ಯಾಸವು ನೀತಿಭ್ರಷ್ಟ, ತುಚ್ಛ ಕಲೆಯೆನಿಸುವುದು.



Protect the Cow

ಗೋರಕ್ಷಣೆಗೆ ಬೆಂಬಲ ನೀಡಿ

S H A K T I

S U D H A

A Superb Tonic

ವುಡ್‌ಲ್ಯಾಂಡ್ಸ್ ಶಿ ನ್ಮ

25–7–69 ರಿಂದ
ಅಮೋಘ ಆರಂಭ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆ
ರಹೆಮಾನ್, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 3ನೇ ವಾರ
ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪು ನ ರ್ಜ ನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja Mysore, and other personages have extended messages of felicr tations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously exten ed donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press, Chamarajapuram, Mysore 4